# ಬೀಡ್ಸ್ ಅಲ್ಲ; ಸೀಡ್ಸ್ ಒಡವೆ

**ಇದು ಸೀಡ್ಸ್ ಒಡವೆಗಳ ಕಾಲ. ವಿವಿಧ ವಿನ್ಯಾಸ, ಬಣ್ಣ, ಆಕಾರದ ಈ ಒಡವೆಗಳು ಯುವತಿಯರ ಮೆಚ್ಚುಗೆ ಗಳಿಸುತ್ತಿವೆ.**

**■ ಆಶಾ ಎಸ್‌. ಕುಲಕರ್ಣಿ**



ಸುಮಾರು 70ರ ದಶಕದಲ್ಲಿ ಬಾಲಿವುಡ್‌ನ 'ಹರೇರಾಮಾ ಹರೇಕೃಷ್ಣ' ಚಿತ್ರದಲ್ಲಿನ ನಟಿ ಧರಿಸಿದ್ದ ಒಂದು ಸುಂದರವಾದ ಉದ್ದನೆಯ ರುದ್ರಾಕ್ಷಿ ಸರ ಹಾಗೂ ಕಪ್ಪು ಬಣ್ಣದ ಪಪ್ಪಾಯ ಹಾಗೂ ಸೇಬಿನ ಬೀಜದಿಂದ ತಯಾರಿಸಿದ ಸರ, ಕಣ್ಣು ಮುಚ್ಚಿ ಬಿಡುವುದರಲ್ಲಿಯೇ ಇಡೀ ಫ್ಯಾಷನ್ ಲೋಕದಲ್ಲಿಯೇ ಸಖತ್ತಾಗಿ ಟ್ರೆಂಡ್ ಸೃಷ್ಟಿಸಿಬಿಟ್ಟಿತ್ತು. ಎಲ್ಲರ ಮನೆ ಮನೆಗಳಲ್ಲಿ ಚಿಕ್ಕ ಚಿಕ್ಕ ಹೆಣ್ಣು ಮಕ್ಕಳಿಂದ ಹಿಡಿದು ಎಲ್ಲಾ ವಯಸ್ಸಿನ ಮಾನಿನಿಯರ ಕೊರಳನ್ನು ಈ ತರಹದ ಸರಗಳು ಅಲಂಕರಿಸಿಬಿಟ್ಟಿದ್ದವು. ಇದೀಗ ಇದೇ ಫ್ಯಾಷನ್ ಮರಳಿ ಫ್ಯಾಷನ್ ಲೋಕಕ್ಕೆ ಕಾಲಿಟ್ಟಿದೆ.

ಅಲಂಕಾರಕ್ಕೆ ಎಷ್ಟೆಲ್ಲ ಸಾಧನಗಳು, ಏನೆಲ್ಲ ಅವತಾರಗಳು! ಬೀಡ್ಸ್ ಒಡವೆ ನಂತರ ಇದೀಗ ಸೀಡ್ಸ್ ಒಡವೆಗಳ ಕಾಲ. ಸಾಮಾನ್ಯವಾಗಿ ಹಣ್ಣು ತರಕಾರಿಗಳನ್ನು ಬಳಸಿದ ಮೇಲೆ ಬೀಜಗಳನ್ನು ಎಸೆಯುತ್ತೇವೆ. ಆದರೆ ಇವುಗಳನ್ನು ಬಳಸಿ ಆಕರ್ಷಕ ಒಡವೆಗಳನ್ನು ತಯಾರಿಸಿ ಧರಿಸಬಹುದು. ಈ ಸೀಡ್ಸ್ ಒಡವೆಗಳು ಫ್ಯಾಷನ್ ಟ್ರೆಂಡ್ ಸೃಷ್ಟಿಸಿವೆ.

ಮಹಿಳೆಯರು ತಾವು ಧರಿಸುವ ಯಾವುದೇ ಜ್ಯುವೆಲ್ಲರಿ ವಿಭಿನ್ನವಾಗಿರಬೇಕು ಎಂದು ಬಯಸುವುದು ಸಹಜ. ಇಂತಹ ವಿಭಿನ್ನ ಒಡವೆಯೇ ಸೀಡ್ಸ್ ಜ್ಯುವೆಲ್ಲರಿ. ಮಹಿಳೆಯರ ಅಲಂಕಾರದಲ್ಲಿ ಸೀಡ್ಸ್ ಒಡವೆಗಳು ಅಂದವನ್ನು ಹೆಚ್ಚಿಸುವುದರ ಜೊತೆಗೆ ಒಂದು ವಿಶಿಷ್ಟ ಲುಕ್ ನೀಡುತ್ತವೆ.

ಸೀಡ್ಸ್ ಅಂದ ತಕ್ಷಣ ನಮ್ಮ ಕಣ್ಣು ಮುಂದೆ ಬರುವುದು ವಿವಿಧ ಹಣ್ಣುಗಳು. ಹಣ್ಣುಗಳನ್ನು ತಿನ್ನಲು ಬಳಸುತ್ತೇವೆ, ಆದರೆ ಅದರಲ್ಲಿರುವ ಬೀಜಗಳೂ ಫ್ಯಾಷನ್ ಟ್ರೆಂಡ್ ಸೃಷ್ಟಿಸುತ್ತವೆ ಎಂದರೆ ನಿಮಗೆ ಆಶ್ಚರ್ಯವಾಗಬಹುದು. ಸೀಡ್ಸ್‌ನಲ್ಲಿಯೂ ವಿವಿಧ ವಿನ್ಯಾಸದ ಒಡವೆಗಳನ್ನು ತಯಾರಿಸಿ ಧರಿಸಬಹುದು.

ಅಂದ ಹಾಗೆ, ಈ ಸೀಡ್ಸ್‌ಗಳಿಂದ ಆಭರಣ ತಯಾರಿಸುವ ಕಲೆ ಇಂದು ನಿನ್ನೆಯದಲ್ಲ. ಹಿಂದಿನ ಕಾಲದಲ್ಲಿ ಬುಡಕಟ್ಟು ಜನಾಂಗದ ಮಹಿಳೆಯರು ಕಾಡಿನಲ್ಲಿ ಸಿಗುವ ಬೇರೆ ಬೇರೆ ಮರಗಳ ಬೀಜಗಳನ್ನು ಬಳಸಿ ಅವುಗಳಿಂದ ಸುಂದರವಾದ ಸರ, ಬಳೆ, ಕಿವಿಯೋಲೆ ತಯಾರಿಸಿ ಧರಿಸಿಕೊಂಡಿರುವುದನ್ನು ಇಂದಿಗೂ ನಾವು ಕೆಲವು ಹಳೆಯ ಪುಸ್ತಕಗಳಲ್ಲಿ, ಸಿನಿಮಾಗಳಲ್ಲಿ ಕಾಣುತ್ತೇವೆ. ಅದೇ ಫ್ಯಾಷನ್ ದಶಕದಿಂದ ನಡೆದುಕೊಂಡು ಬರುತ್ತಿದೆ.

ಸೀಡ್ಸ್ ಎಂದರೆ ಕಿತ್ತಳೆ, ಚಿಕ್ಕು, ಸೇಬು, ಪಪ್ಪಾಯ ಹಣ್ಣುಗಳ, ಕುಂಬಳಕಾಯಿ ಮುಂತಾದ ತರಕಾರಿಗಳ ಬೀಜಗಳು. ಜೊತೆಗೆ ಭತ್ತ, ಅಂಟುವಾಳ ಕಾಯಿ, ನೀಲಗಿರಿ ಹೂ, ಗುಲಗಂಜಿ ಬೀಜ, ಅಡಿಕೆ, ರುದ್ರಾಕ್ಷಿ, ಸೂರ್ಯಕಾಂತಿ ಬೀಜ ಹಾಗೂ ಮಸಾಲೆಯಲ್ಲಿ ಬಳಸುವ ಸಾಕಷ್ಟು ಪದಾರ್ಥಗಳಲ್ಲಿಯೂ ಒಡವೆ ತಯಾರಿಸಬಹುದು. ಹೂಗಳಿಂದಲೂ ತಯಾರಿಸಿದ ಹಾರ, ಬಳೆ, ಕಿವಿಯೋಲೆ, ಕಾಲ್ಗೆಜ್ಜೆ ಮುಂತಾದ ಜ್ಯುವೆಲ್ಲರಿಗಳು ಇದೀಗ ಯುವತಿಯರನ್ನು ಬಹುವಾಗಿ ಸೆಳೆಯುತ್ತಿವೆ.

ಗುಲಗಂಜಿ ನೋಡಲು ತುಂಬಾ ಸುಂದರವಾಗಿದ್ದು, ಕಪ್ಪು ಹಾಗೂ ಕೆಂಪು ಬಣ್ಣದಿಂದ ಕೂಡಿದ ಬೀಜ. ಇದರಿಂದ ತಯಾರಿಸಿದ ಹಾರ, ಕಿವಿಯೋಲೆ ಹಾಗೂ ಬಳೆಗಳು ನೀವು ಧರಿಸುವ ಯಾವುದೇ ಉಡುಪಿಗೂ ಮ್ಯಾಚ್ ಆಗುತ್ತದೆ. ಈ ಕಾರಣದಿಂದ ಇದು ಸಾಕಷ್ಟು ಟ್ರೆಂಡಿಂಗ್‌ನಲ್ಲಿದೆ. ಇತರ ಸೀಡ್ಸ್‌ನಿಂದ ತಯಾರಿಸಿದ ಜ್ಯುವೆಲರಿಗಳು ಸಾಂಪ್ರದಾಯಿಕ ಮತ್ತು ಆಧುನಿಕ ಎರಡೂ ಉಡುಪುಗಳಿಗೆ ಮ್ಯಾಚ್ ಆಗುತ್ತವೆ. ಇತ್ತೀಚೆಗೆ ಈ ಸೀಡ್ಸ್ ಜ್ಯುವೆಲ್ಲರಿ ತಯಾರಿಸಲು ಖಾದಿ ಬಟ್ಟೆಗಳನ್ನು ಉಪಯೋಗಿಸಲಾಗುತ್ತಿದೆ. ಖಾದಿ ಬಟ್ಟೆಗಳನ್ನು ತಮ್ಮ ಕ್ರಿಯಾಶೀಲತೆಗೆ ಅನುಸಾರವಾಗಿ ಕತ್ತರಿಸಿಕೊಂಡು ಅದರ ಮೇಲೇ ಕಲಾತ್ಮಕವಾಗಿ ಬೇರೆ ಬೇರೆ ಬೀಜಗಳನ್ನು ಅಂಟಿಸಿ, ಅದಕ್ಕೊಂಡು ವಿಶಿಷ್ಟ ಲುಕ್ ಸಿಗುವಂತೆ ಹಾರಗಳನ್ನು ತಯಾರಿಸುತ್ತಿದ್ದಾರೆ. ಈ ಹಾರದ ಕೆಳಭಾಗದಲ್ಲಿ ಸ್ವಲ್ಪ ದೊಡ್ಡದಾದ ಚಿಕ್ಕು ಹಣ್ಣಿನ ಬೀಜಗಳನ್ನು ದಾರದಿಂದ ಅಥವಾ ವಯರ್‌ನಿಂದ ಪೋಣಿಸಿ ನೆಕ್ಲೇಸ್ ಮಾದರಿಯಲ್ಲಿ ಮಾರುಕಟ್ಟೆಗೆ ಬಿಟ್ಟಿದ್ದಾರೆ. ಇಂತಹ ನೆಕ್ಲೇಸ್‌ಗಳು ನಾವು ಧರಿಸುವ ಯಾವುದೇ

